ಅವರಲ್ಲಿ ನಾನೂ ಒಬ್ಬಳು. ಝಾರ್ ದೊರೆಗಳು ಎಂಥಾ ನೀಚರು, ಕಟುಕರು, ಅಮಾನುಷರು ಗೊತ್ತಾ? ನನ್ನ ಅಪ್ಪ, ನಿನ್ನ ಅಪ್ಪ, ತಾತ ಎಲ್ಲರೂ ಆ ಗುಂಪಿಗೆ ಸೇರಿದವರು ಎಂಬುದೇ ದೊಡ್ಡ ದುರಂತ. ನಿನ್ನನ್ನೇ ತಗೋ; ಇರೋದು ನೀನೊಬ್ಬನೆ. ನಿನಗಿರೋದು ಮಾತ್ರ ಸಾವಿರಾರು ಕೋಟಿ ರೂಪಾಯಿ ಸಂಪತ್ತು. ನಾನೂ ನೋಡ್ತಾ ಇದೀನಿ, ನಮ್ಮಪ್ಪ ಕೂಡ ಹಗಲು ರಾತ್ರಿ ಎನ್ನದೆ ನೂರಾರು ಕೋಟಿ ಸಂಪಾದಿಸುತ್ತಲೇ ಇದ್ದಾನೆ. **Do you know?** ನಮ್ಮ ಮನೆಯಲ್ಲಿ ನನ್ನನ್ನ ಮತ್ತು ಅಣ್ಣನನ್ನು ಬಿಟ್ಟರೆ ಎಲ್ಲರೂ ಡಯಾಬಿಟಿಕ್ ಪೇಶೆಂಟ್ಸ್. ದಿನವೂ ಸರಿಯಾಗಿ ಎರಡೆರಡು ಚಪಾತಿ ಯಾರೂ ತಿನ್ನುವುದಿಲ್ಲ. ಅಷ್ಟು ಮಾತ್ರಕ್ಕೆ ಯಾಕಿಷ್ಟು ಸಂಪತ್ತನ್ನು ಕಲೆಕ್ಟ್ ಮಾಡ್ತಾ ಇದಾರೋ ಗೊತ್ತಿಲ್ಲ. ಎಷ್ಟು ಜನ ಸರಿಯಾದ ಆಹಾರ, ಬಟ್ಟೆ, ವಸತಿ ಇಲ್ಲದೆ ಈ ದೇಶದಲ್ಲಿ ಬದುಕ್ತಾ ಇದಾರೆ ಹೇಳು ನೋಡೋಣ' ಸಾಯಿಪ್ರಭೆ ಮಾತು ನಿಲ್ಲಿಸಿ ಟೇಬಲ್ ಮೇಲಿದ್ದ ಮ್ಯಾಂಗೊ ಜ್ಯೂಸನ್ನು ಎರಡು ಗ್ಲಾಸಿಗೆ ಬಗ್ಗಿಸಿ ಒಂದನ್ನು ಆಸ್ಕರ್ ವೈಲ್ಡನಿಗೆ ಕೊಟ್ಟು ಮತ್ತೊಂದನ್ನು ತಾನು ಬಾಯಿಗಿಟ್ಟುಕೊಂಡಿದ್ದಳು. ಭಜನ್ ಲಾಲನ ಮಗಳ ತಲೆಯಲ್ಲಿ ಇಂಥ ಆಲೋಚನೆಗಳು ಅದು ಹೇಗೆ ಟಿಸಿಲೊಡೆದವೆಂದು ಕ್ಷಣ ಅಚ್ಚರಿಗೆ ಬಿದ್ದ ಆಸ್ಕರ್ ವೈಲ್ಡ್. ಜ್ಯೂಸಿನ ಗ್ಲಾಸನ್ನು ಬಾಯಿಗಿಟ್ಟುಕೊಂಡು 'ನನಗೂ ಬಡತನದ ಬಗ್ಗೆ ಗೊತ್ತಿದೆ. ಒಮ್ಮೆ ಕಾಮಾಟಿಪುರಕ್ಕೆ ಹೋಗಿದ್ದೆ. ಅಲ್ಲಿನ ಜನರ ಬದುಕು ಕಂಡು ನಿಜಕ್ಕೂ ನನಗೆ ಕನಿಕರವೆನಿಸಿತು. ಆದರೆ ಯಾವುದೇ ವ್ಯಕ್ತಿಯ ಬದುಕನ್ನು ಆ ವ್ಯಕ್ತಿಯ ಹುಟ್ಟು ಮಾತ್ರವೇ ನಿರ್ಧರಿಸುವುದು. ನಾನು ಕಾಮಾಟಿಪುರದಲ್ಲೊ ಇಲ್ಲ ಧಾರಾವಿಯಲ್ಲೊ ಹುಟ್ಟಿದ್ದರೆ ನಾನು ಹಾಗೇ ಬದುಕಬೇಕಿತ್ತು. ಮತ್ತು ನೀನು ಹುಟ್ಟಿದ್ದರೂ ಹಾಗೆಯೇ ಬದುಕಬೇಕಾಗಿತ್ತು. ಹುಟ್ಟು ಮತ್ತು ಸಾವು ಮನುಷ್ಯನ ಕೈಯಲ್ಲಿ ಇಲ್ಲವಲ್ಲ' ತಾನು ಆಡಿದ್ದ ಮಾತುಗಳು ಸ್ವತಃ ಆಸ್ಕರ್ ವೈಲ್ಡನಿಗೆ ಅಚ್ಚರಿಯನ್ನು ಮೂಡಿಸಿದ್ದವು.

'ಗುಡ್, ಲಿಟರೇಚರ್ ನಿನಗೊಂದಿಷ್ಟು ಮಾತನಾಡುವುದನ್ನು ಕಲಿಸಿದೆ. ಇರಲಿ, ನಿಮ್ಮ ಮನೆಯವರು ಒಪ್ಪದಿದ್ದರೂ ನೀನು ನನ್ನನ್ನು ಮದುವೆಯಾಗಲು ರೆಡಿ ಇದ್ದೀಯ?' ಥಟ್ಟನೆ ಕೇಳಿದ್ದಳು.

'ಅದು ಹೇಗೆ ಸಾಧ್ಯ?' ತನ್ನ ಮಾತುಗಳು ಹಳಿ ತಪ್ಪದಂತೆ ಎಚ್ಚರವಹಿಸಿದ್ದ.

'ಆದರೆ ನಾನು ಹಾಗೆ ತೀರ್ಮಾನಿಸಬಲ್ಲೆ. ಒಂದು ವೇಳೆ ನಮ್ಮೆರಡೂ ಮನೆಯವರು ಒಪ್ಪಿ ಮದುವೆ ಮಾಡಬಹುದು. ಹಾಗಾಗಿ ಒಂದು ಸಂಗತಿಯನ್ನು ಮೊದಲೇ ನಿನಗೆ ಹೇಳಿಬಿಡುತ್ತೇನೆ. ಈ ವಿಷಯವನ್ನು ನಿನ್ನಲ್ಲೇ ಇಟ್ಟುಕೊ. ನಾನು ಪ್ಯಾರಿಸಿನಲ್ಲಿ ಸ್ಟಡಿ ಮಾಡುವಾಗ ನನ್ನ ಕ್ಲಾಸ್‌ಮೇಟ್ ಜಾನಿ ಮ್ಯಾಕ್ಸ್ ಎಂಬುವನೊಂದಿಗೆ ಗೆಳೆತನವಾಯಿತು. ಯೂನಿವರ್ಸಿಟಿ ಫುಟ್ಬಾಲ್ ಪ್ಲೇಯರ್. ಅವರಪ್ಪ ಮಿಲಿಟರಿಯಲ್ಲಿದ್ದಾನೆ. ಸಿ.ಎ. ಪ್ಯಾರಿಸ್ ಚರೆಂಟನ್ ಕ್ಲಬ್‌ಗೆ ಸೇರಲು ಜಾನಿ ಮ್ಯಾಕ್ಸ್‌ಗೆ ನಾನು ಎರಡು ಸಾವಿರ ಯುರೊ

## ಕಳೆದ ಸಂಚಿಕೆಯಲ್ಲಿ



ಸೋನಾಗೆ ಸ್ವರ್ಗ ತೋರಿಸುತ್ತೇನೆಂದು ಅಂಜಲಿ ದೇಸಾಯಿ ಆಹ್ವಾನಿಸಿದ್ದಳು. ಸ್ವರ್ಗ ನೋಡಲು ಆಸೆಯಿದ್ದರೂ, ಯಾವುದೋ ಅಳುಕಿನಿಂದ ಸೋನಾ ಹಿಂಜರಿದಿದ್ದ. ಸೋನಾಗೆ ತಪ್ಪಿದ ಸ್ವರ್ಗ ಅವನ ಗೆಳೆಯ ಮ್ಯಾಥ್ಯೂ ಅಲೆಗ್ಸಾಂಡರ್‌ನ ಪಾಲಾಗಿತ್ತು. ಹಳೆಯದನ್ನೆಲ್ಲ ನೆನಪಿಸಿಕೊಂಡ ಆಸ್ಕರ್ ವೈಲ್ಡ್‌ಗೆ ಗೆಳೆಯನನ್ನು ನೋಡಬೇಕೆನ್ನಿಸಿತು. ಮ್ಯಾಥ್ಯೂ ತನ್ನ ಅಪ್ಪನ ಜಗತ್ತಿನಲ್ಲಿ ಅಗಾಧವಾಗಿ ಬೆಳೆದಿದ್ದ. ತನ್ನನ್ನು ಭೇಟಿಯಾದ ವೈಲ್ಡ್‌ನನ್ನು ಕಾಮಾಟಿಪುರ ತೋರಿಸಲು ಕರೆದುಕೊಂಡು ಹೋದ. ಅಲ್ಲಿನ ಜನ ಹೇಗೆ ಬದುಕುತ್ತಿದ್ದಾರೆ ಎಂದು ವೈಲ್ಡ್‌ಗನ್ನಿಸಿತು. ಅವನ ಪ್ರಶ್ನೆಗೆ ಉತ್ತರವಂತೆ ಅಲ್ಲಿನ ಹೆಣ್ಣುಮಕ್ಕಳ ಬದುಕುಗಳು ಅವನನ್ನು ಎದುರಾದವು. ಒಬ್ಬೊಬ್ಬರದು ಒಂದು ಕಥೆ. ಅವರೆಲ್ಲರ ವ್ಯಥೆಗಳನ್ನು ಕೇಳಿ ವೈಲ್ಡ್ ಕರಗಿಹೋದ. ತಾನು ಇದುವರೆಗೂ ನೋಡದ ಜಗತ್ತನ್ನು ಕಂಡು ಬೆಚ್ಚಿಬಿದ್ದಿದ್ದ. ತಕ್ಷಣ ಅಲ್ಲಿಂದ ಹೊರಟು ಮನೆ ಸೇರಿ ಮುಖ ಮರೆಸಿಕೊಂಡ. ಡಾಕ್ಟರ್ ಮನೋರಂಜನಿ ಅವರಿಗೆ ಫೋನ್ ಮಾಡಿ ತನ್ನ ತುಮುಲ ಹಂಚಿಕೊಂಡ. ಅವರಿಗೆ ವೈಲ್ಡ್‌ನ ಕಾಮಾಟಿಪುರದ ಭೇಟಿ ನಿರೀಕ್ಷಿತವೇ ಆಗಿತ್ತು.

ಕೊಟ್ಟೆ. ಎಷ್ಟು ಕೃತಜ್ಞತೆ ತೋರಿದ್ದ ಗೊತ್ತಾ? ಕ್ಲಬ್ಬಿನ ಫುಟ್ಬಾಲ್ ಮೈದಾನದಲ್ಲಿ ಎಲ್ಲರ ಎದುರಿಗೂ ನನ್ನ ಪಾದಗಳಿಗೆ ಮುತ್ತನ್ನು ಕೊಟ್ಟಿದ್ದ. ಒಂದೇ ವರ್ಷದಲ್ಲಿ ಕ್ಲಬ್‌ಗೆ ತುಂಬಾ ಮ್ಯಾಚುಗಳನ್ನು ಗೆಲ್ಲಿಸಿಕೊಟ್ಟ. ಹಾಗಾಗಿ ಪ್ಯಾರಿಸ್ ಮೈನ್ ಟೀಮಿಗೆ ಸೆಲೆಕ್ಟಾಗಿಬಿಟ್ಟ. ಅವತ್ತು ನನ್ನನ್ನು ಖುಷಿಯಿಂದ ಅವನು ತನ್ನ ಮನೆಗೆ ಪಾರ್ಟಿಗೆ ಕರೆದಿದ್ದ. ಇಬ್ಬರೂ ವೈನ್ ಕುಡಿದಿದ್ದೆವು. ನನಗೇನು ಇಷ್ಟವೆಂದು ಕೇಳಿದ್ದ. ತಕ್ಷಣ ಮಲ್ಲಿಗೆ ಎಂದು ಬಿಟ್ಟೆ. ನೀನು ನಂಬಲಿಕ್ಕಿಲ್ಲ, ಸರಿಯಾಗಿ ಒಂದು ಚೀಲ ಮಲ್ಲಿಗೆಯನ್ನು ಅರ್ಧ ಗಂಟೆಯಲ್ಲಿ ತರಿಸಿದ್ದ. ನನ್ನನ್ನು ಮಲ್ಲಿಗೆಯ ಹೂವಿನಲ್ಲಿ ಸಂಪೂರ್ಣವಾಗಿ ಮುಳುಗಿಸಿ ತಾನೂ ಮುಳುಗಿ ಅದರ ಸುವಾಸನೆಯಲ್ಲಿ ನನ್ನನ್ನು ಒದ್ದಾಡುವಂತೆ ಮಾಡಿಬಿಟ್ಟ. ಹಾಗೆ ಎಷ್ಟೊಂದು ಸಾರಿ ಮಲ್ಲಿಗೆಯ ರಾಶಿಗಳಲ್ಲಿ ಇಬ್ಬರೂ ಮುಳುಗಿ ಒದ್ದಾಡಿದ್ದೇವೋ. ನಾನು ಎಷ್ಟು ಎಚ್ಚರವಹಿಸಿದ್ದರೂ ಒಂದೂವರೆ ವರ್ಷದಲ್ಲಿ ಮೂರು ಬಾರಿ ಅಬಾರ್ಷನ್ ಮಾಡಿಸಿಕೊಂಡಿದ್ದೆ...' ಅವಳು ಮಾತು ಮುಗಿಸಿ ಜ್ಯೂಸ್ ಗ್ಲಾಸನ್ನು ಟೇಬಲ್ ಮೇಲಿರಿಸಿದ್ದಳು. ಬಾಯಿ ಒಣಗಿದಂತಾಗಿ ಆಸ್ಕರ್ ವೈಲ್ಡ್ ಗ್ಲಾಸಿನಲ್ಲಿದ್ದ ಅರ್ಧ ಜ್ಯೂಸನ್ನು ಒಂದೇ ಬಾರಿಗೆ ಕುಡಿದು ಅವಳ ಗ್ಲಾಸಿನ ಪಕ್ಕದಲ್ಲಿ ತನ್ನ ಗ್ಲಾಸನ್ನೂ ಇಟ್ಟು– 'ವ್ಹಾಟ್ ಎ ವಂಡರ್‌ಫುಲ್ ಸ್ಟೋರಿ. ನಿಜಕ್ಕೂ ಒಂದು ಸುಂದರ ಕನಸಿನಂತೆಯೇ ಇದೆ' ಎಂದು ನಕ್ಕು ಕವಿಯಂತೆ ಮಾತನಾಡಿದ್ದ.

'ಅಂಜಲಿ ದೇಸಾಯಿ ಫೋನ್ ಮಾಡಿದ್ಲು ರಾತ್ರಿ ಲಂಡನ್ನಿನಿಂದ. ನನ್ನ ಫ್ಯಾಮಿಲಿ ಫ್ರೆಂಡ್ ಅವಳು. ಪುಣೆಗೆ ಬಂದರೆ ನನ್ನನ್ನು ನೋಡದೆ ಹೋಗುವುದಿಲ್ಲ. ನಿನ್ನ ಹಳೆಯ ಕಥೆಯನ್ನು ಹೇಳಿ ಹತ್ತು ನಿಮಿಷ ನಕ್ಕಿದ್ದಳು. ನೀನು ಅವತ್ತು ಕೈಕೊಟ್ಟಿದ್ದಕ್ಕೆ ಅವಳು ನಿನ್ನ ಫ್ರೆಂಡನ್ನು ಕರೆದುಕೊಂಡು ಬಂದಿದ್ದಳಂತೆ ಪುಣೆಗೆ. ಅಂಥ ಸುಂದರೀನ ಅದೂ ಆ ಟೀನೇಜಿನಲ್ಲಿ ಅದ್ಯಾಕಾಗಿ ರಿಜೆಕ್ಟ್ ಮಾಡ್ದೆ. ಲಂಡನ್‌ನಲ್ಲೇ ಸೆಟ್ಲಾಗಿಬಿಟ್ಟಿದ್ದಾಳೆ. ಇಬ್ಬರು ಮಕ್ಕಳು. ತುಂಬಾ ಫೇರ್ ಆಗಿದ್ದ ಗಂಡನ ಹೊಟ್ಟೆ ಈಗ ಗುಡಾಣದಂತಾಗಿದೆ. ಅವಳಿಗೊಬ್ಬ ಬಾಯ್‌ಫ್ರೆಂಡ್ ಕೂಡ ಇದಾನೆ. ಅವಳಿಗಿಂತಲೂ ಎರಡು ವರ್ಷ ಚಿಕ್ಕವನು. ಅವರಿಬ್ಬರ ಫ್ರೆಂಡ್‌ಶಿಪ್ ಗಂಡನಿಗೂ ಗೊತ್ತಿದೆ. ಗಂಡನೇ ಖುಷಿಯಿಂದ ರೋಮ್, ಲಿವರ್ ಪೂಲ್, ನ್ಯೂ ಕೆಸಲ್‌ಗಳಿಗೆ ಅವಳನ್ನು ಬಾಯ್ ಫ್ರೆಂಡ್ ಜೊತೆ ಡೇಟಿಂಗ್‌ಗೆ ಕಳಿಸ್ತಾನಂತೆ. ಮಾನವ ಜನ್ಮ ಒಂದೇ ಬಾರಿ ಸಿಗೋದು, ಅದನ್ನ ಅಚ್ಚುಕಟ್ಟಾಗಿ, ಪರಿಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ನನ್ನ ಮತ್ತು ಅಂಜಲಿ ದೇಸಾಯಿಯ ಇಬ್ಬರ ಟೇಸ್ಟ್ ಮತ್ತು ಕ್ಯಾರೆಕ್ಟರ್ ಒಂದೇ. ಹಂಗಂತ ಅಪ್ಪನ ಜೊತೆ ಮೂರು ತಿಂಗಳಿಗೊಮ್ಮೆ ಶಿರಡಿಗೆ ಹೋಗಿ ಸಾಯಿಬಾಬಾನ ದರ್ಶನ ಪಡೆಯೋದನ್ನ ನಾನೇನು ನಿಲ್ಲಿಸಿಲ್ಲ. ಭಕ್ತಿ ಬೇರೆ ಬದುಕು ಬೇರೆ. ಮನುಷ್ಯ ತಾನು ಮಾಡಿದ ತಪ್ಪುಗಳನ್ನು ಕ್ಷಮಿಸುವಂತೆ ದೇವರಲ್ಲಿ ಮೊರೆಹೋಗುವುದೇ ಜಾಸ್ತಿ' ದೀರ್ಘವಾಗಿ ಮಾತನಾಡಿ ಮುಂದಕ್ಕೆ ಬಗ್ಗಿ ಆಸ್ಕರ್ ವೈಲ್ಡನ ಕೆನ್ನೆಗೆ ಜೋರಾಗಿ ತುಟಿಯನ್ನು ಒತ್ತಿದ್ದಳು. ನಂತರ ಇಬ್ಬರೂ ರೂಮಿನಿಂದ ಹೊರಬಂದಿದ್ದರು.

ಮುಂಬಯಿಗೆ ಹಿಂತಿರುಗಿದ ಗುನ್ನಾಲಾಲ್ ಕುಟುಂಬಕ್ಕೆ ಸಾಯಿಪ್ರಭೆ ತುಂಬಾ ಹಿಡಿಸಿದ್ದಳು. ಅವಳ ಚೆಲುವು, ವಿನಯ, ಮೆಲುಧ್ವನಿ ಎಲ್ಲವೂ ಎಲ್ಲರಿಗೂ ಮೆಚ್ಚುಗೆಯಾಗಿತ್ತು. ತಾನು ಸಾಯಿಪ್ರಭೆಯೊಂದಿಗೆ ಅರ್ಧ ಗಂಟೆ ಮಾತನಾಡಿದ ಸಂಗತಿಯನ್ನು ಕುರಿತು ಆಸ್ಕರ್ ವೈಲ್ಡನನ್ನು ಯಾರೂ ವಿಚಾರಿಸಲಿಲ್ಲ. ಆಧುನಿಕ ಹುಡುಗ–ಹುಡುಗಿಯರು ತಮ್ಮ ಇಷ್ಟವಾದ ಸಂಗತಿಗಳ ಬಗ್ಗೆ ಮುಜುಗರವಿಲ್ಲದೆ ಮಾತನಾಡುವ ರೀತಿಯ ಬಗ್ಗೆ ಎಲ್ಲರಿಗೂ ತಿಳಿದ ವಿಷಯವೇ ಅಲ್ಲವೆ? ಹಾಗಾಗಿ ಆಸ್ಕರ್ ವೈಲ್ಡನನ್ನು ಆ ಬಗ್ಗೆ ಯಾರೊಬ್ಬರೂ ವಿಚಾರಿಸಿರಲಿಲ್ಲ. ಅಹಲ್ಯಾ ರಾಣಿಗೆ ಮದುವೆ ಬೇಗನೆ ಮುಗಿಯಲಿ ಎಂಬ